C.C-130/2023

ಪಿ. ಡಬ್ಲೂ - 1

ಸಾಕ್ಷಿಯನ್ನು ದಿಃ 08.05.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ.ಎಂ.ಎ.ಬಿ ರವರಿಂದಃ**

ನಿಪಿ-10 ರಂತೆ 5 ಲಕ್ಷ ರೂ. ಗಳು ನನ್ನ ಖಾತೆಗೆ ದಿನಾಂಕ 21.12.2021 ರಂದು ವರ್ಗಾವಣೆಯಾಗಿದೆ ಎಂದರೆ ಸರಿ. ಆ ಹಣವನ್ನು ಅದೇ ದಿನ ನಾವು ಬ್ಯಾಂಕಿನಿಂದ ಪಡೆದುಕೊಂಡಿದ್ದೇವೆ. ನಿಪಿ-10 ರ ಕರಾರಿಗೆ ಒಂದೂವರೆ ವರ್ಷ ಸಮಯವನ್ನು ನಿಗದಿಪಡಿಸಿದ್ದೆವು. ನಿಪಿ-10 ರ ಕರಾರಿನಂತೆ ಸದರಿ ದಾಖಲೆಯ ಸತೀಶ್ ಎಂ ರೇವಣಕರ್ ಬಿನ್ ಮೋಹನ್ ಎಸ್ ರೇವಣಕರ್ ರವರಿಗೆ ಕ್ರಯವನ್ನು ನೊಂದಣಿ ಮಾಡಿಕೊಟ್ಟಿಲ್ಲ. ನಾವು ನಿವೇಶನ ಸಂಖ್ಯೆ 89 ಅನ್ನು

ಬೇರೆಯವರಿಗೆ ಮಾರಾಟ ಮಾಡಿದ ಕಾರಣ ನಿಪಿ–10 ರ ಕರಾರು ರದ್ದಾಯಿತು ಎಂದರೆ ಸರಿ. ನಿಪಿ–10 ರ ದಾಖಲೆಯನ್ನು ನಾವು ರದ್ದು ಮಾಡಿದ್ದೇವೆ. ನಿಪಿ–10 ರ ದಾಖಲೆಯನ್ನು ರದ್ದು ಮಾಡಿದ ಕಾರಣ ಆ ದಾಖಲೆಯ ಅನುಸಾರ ನಾವು ಪಡೆದ ಹಣವನ್ನು ವಾಪಸ್ಸು ನೀಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಣವನ್ನು ಸತೀಶ್ ರವರಿಗೆ ವಾಪಸ್ಸು ನೀಡಿದ್ದೇವೆ ಎಂದು ನುಡಿಯುತ್ತಾರೆ. ನಿಪಿ–10 ಅನ್ನು ರದ್ದು ಮಾಡಿದ ದಿನಾಂಕ ನನಗೆ ನೆನಪಿಲ್ಲ. ನಿಪಿ–10 ರ ಕರಾರನ್ನು ರದ್ದು ಮಾಡಿದ ಬಗ್ಗೆ ದಾಖಲೆಗಳು ನನ್ನ ಬಳಿ ಇಲ್ಲ. ಮುಂದುವರೆದು ನಮ್ಮ ನಿವೇಶನವನ್ನು ಖರೀದಿ ಮಾಡಿದವರೇ ರದ್ದು ಮಾಡಿಕೊಂಡಿದ್ದಾರೆ. ನಿಪಿ–10 ರ ಪ್ರತಿಫಲವನ್ನು ಸತೀಶ್ ರವರಿಗೆ ನಮ್ಮ ನಿವೇಶನವನ್ನು ಖರೀದಿ ಮಾಡಿದ ವ್ಯಕ್ತಿಯಿಂದ ನೇರವಾಗಿ ನಗದಾಗಿ ಕೊಡಿಸಿದ್ದೇವೆ.

ನಮ್ಮ ನಿವೇಶನವನ್ನು ಖರೀದಿ ಮಾಡಿದವರ ಹೆಸರು ಈಗ ನನಗೆ ನೆನಪಿಲ್ಲ. ಸದರಿ ನಿವೇಶನದ ಕ್ರಯ ಪತ್ರವು ಸಹ ನನ್ನ ಬಳಿ ಇಲ್ಲ. ಸದರಿ ನಿವೇಶನದ ಕ್ರಯದ ಪ್ರತಿಫಲವನ್ನು ನನ್ನ ಖಾತೆಗೆ ಜಮೆ ಮಾಡಿದ್ದಾರೆ ಎಂದರೆ ಸರಿ. ಸದರಿ ಹಣ ಜಮೆ ಆದ ನನ್ನ ಬ್ಯಾಂಕಿನ ಖಾತೆ ಪುಸ್ತಕವನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸದರಿ ಪ್ರತಿಫಲದ ಹಣದಲ್ಲಿ ನನ್ನ ಗಂಡನ ಆಸ್ಪತ್ರೆ ಖರ್ಚನ್ನು ಸಹ ಬರೆಸಿದ್ದೇನೆ ಎನ್ನುವುದು ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.